ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 3, Nov-Dec 2021, 73-84
©*IIMRD*, Mysuru

IIMRD JOURNALS
www.iimrd.com

# ಆಧುನಿಕ ಕನ್ನಡ ಕಾವ್ಯಗಳಲ್ಲಿ ಅತ್ಯಾಚಾರದ ನಿರೂಪಣೆಗಳು (ಮಹಿಳಾ ಕಾವ್ಯಗಳನ್ನು ಅನುಲಕ್ಷಿಸಿ)

ಶಿಲ್ಪ. ಎ*
*ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ,ಹಂಪಿ

***ಸಾರಾಂಶ (Abstract)***

*ಅತ್ಯಾಚಾರದ ಕುರಿತಾದ ಪ್ರಸ್ತಾಪವು ಇಂದು ನೆನ್ನೆಯದಲ್ಲ. ವೇದ, ಪುರಾಣ, ರಾಮಾಯಾಣ, ಮಹಾಭಾರತಗಳ ಕಾಲದಿಂದಲೂ ಅತ್ಯಾಚಾರದ ಕುರಿತಾದ ಪ್ರಸಂಗಗಳ ಕುರಿತಾಗಿ ಪ್ರಸ್ತಾಪಗಳಿವೆ. ಆದರೆ ಅತ್ಯಾಚಾರ ಎಂಬ ಪದ ಬಳಕೆಯ ಬದಲಾಗಿ ಬಲತ್ಕಾರ, ಮಾನಭಂಗ, ಬುಲ್ಲು ಮುಂತಾದ ಹೆಸರುಗಳಿಂದ ಮಾರ್ಪಾಡುಗೊಂಡು ನಂತರದಲ್ಲಿ ಅತ್ಯಾಚಾರ ಎಂದು ರೂಪುಗೊಂಡಿತು. ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಇಚ್ಚೆಗೆ ವಿರುದ್ಧವಾಗಿ ದೇಹ ಬಳಸಿಕೊಳ್ಳುವುದನ್ನು ಅತ್ಯಾಚಾರವೆನ್ನಬಹುದು. ಸಾಹಿತ್ಯದಲ್ಲಿ ಅತ್ಯಾಚಾರದ ಪ್ರಸ್ತಾಪಗಳನ್ನು ಕುರಿತು ಹೇಳುವುದಾದರೆ, ಕನ್ನಡದ ಮೊದಲ ಗದ್ಯ ಕೃತಿಯಾದ ವಡ್ಡಾರಾಧನೆಯಿಂದ ಹಿಡಿದು ಪ್ರಸ್ತುತದವರೆಗೂ ಅತ್ಯಾಚಾರದ ಪ್ರಸಂಗಗಳಿರುವುದನ್ನು ಗಮನಿಸಬಹುದು. ಇಲ್ಲಿ ಮುಖ್ಯವಾಗಿ ಆಧುನಿಕ ಮಹಿಳಾ ಕಾವ್ಯಗಳು ಅತ್ಯಾಚಾರದ ಪ್ರಸಂಗಗಳನ್ನು ಹೇಗೆ ನಿರೂಪಿಸಿವೆ ಎಂಬುದನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗುತ್ತದೆ.*

***ಮುಖ್ಯಪದಗಳು (Keywords)*:** ಅತ್ಯಾಚಾರ, ಆಧುನಿಕ ಸಾಹಿತ್ಯ, ಕಾವ್ಯ, ಮಹಿಳಾ ದೌರ್ಜನ್ಯ.

**ಪೀಠಿಕೆ**

ಅತ್ಯಾಚಾರ ಒಂದು ಪ್ರಕರಣವಾಗಿ ದಾಖಲು ಪಡೆಯಲು ರೂಪುಗೊಳ್ಳಲು ಅಲ್ಲಿನ ದೇಶ, ಕಾಲ, ಸಂಸ್ಕೃತಿ ಹಾಗೂ ಕಾನೂನುಗಳನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ, ಭಾರತದಲ್ಲಿ ದಾಂಪತ್ಯದಲ್ಲಿ ನಡೆಯುವ ಅತ್ಯಾಚಾರವನ್ನು ಇಲ್ಲಿನ ಸಮಾಜ ಪರಿಗಣಿಸಿಲ್ಲ; ಅಷ್ಟೇ ಅಲ್ಲದೇ ಗಂಡು ಹೆಣ್ಣಿನ ಮೇಲೆ ನಡೆಸುವ ಅತ್ಯಾಚಾರಕ್ಕೆ ಹೆಚ್ಚು ಮಹತ್ವ ನೀಡಿದೆ. ಇಲ್ಲಿ ಗಂಡು ಗಂಡುಗಳ ಮೇಲೆ ನಡೆಸುವ ಅತ್ಯಾಚಾರವನ್ನು ಗೌಣವಾಗಿಸುತ್ತಿದೆ. ಇನ್ನು ವಿಸ್ತೃತವಾಗಿ ವಿವರಿಸಬೇಕಾದರೆ ಒಬ್ಬ ಸಾಮಾಜಿಕ ಸ್ತ್ರೀ ಅಥವಾ ಹೆಣ್ಣುಮಕ್ಕಳ ಮೇಲೆ ನಡೆಯುವ ಅತ್ಯಾಚಾರವನ್ನು ಪರಿಗಣಿಸಿ, ಹೆಣ್ಣನ್ನು ದುರ್ಬಳಕೆ ಮಾಡಿಕೊಳ್ಳಲು ಕಟ್ಟಿಕೊಟ್ಟಿರುವಂತಹ ವೇಶ್ಯೆ / ಸೂಳೆ ಇವರುಗಳ ಮೇಲೆ ಮತ್ತು ವಿಭಿನ್ನ ಲೈಂಗಿಕ ಅಸ್ಮಿತೆಯುಳ್ಳವರ ಮೇಲೆ

*Please cite this article as: ಶಿಲ್ಪ. ಎ (2021).* ಆಧುನಿಕ ಕನ್ನಡ ಕಾವ್ಯಗಳಲ್ಲಿ ಅತ್ಯಾಚಾರದ ನಿರೂಪಣೆಗಳು (ಮಹಿಳಾ ಕಾವ್ಯಗಳನ್ನು ಅನುಲಕ್ಷಿಸಿ). *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 73–84*

ನಡೆಯುವ ಅತ್ಯಾಚಾರವನ್ನು ಪರಿಗಣಿಸುವುದಿಲ್ಲ. ಹಾಗಾಗಿ ಅತ್ಯಾಚಾರವು ಒಂದು ಪ್ರಕರಣವಾಗಿ ರೂಪುಗೊಳ್ಳಲು ದೇಶ, ಕಾಲ, ಸಂಸ್ಕೃತಿ ಹಾಗೂ ಕಾನೂನುಗಳು ಬಹುಮುಖ್ಯವಾಗಿರುತ್ತದೆ.

ಅತ್ಯಾಚಾರವನ್ನು ಕುರಿತು ಮಹಿಳಾ ಕಾವ್ಯಗಳು ವಿಭಿನ್ನ ನೆಲೆಯಲ್ಲಿ ಚಿತ್ರಿಸುತ್ತವೆ. ಗಂಡು ಹೆಣ್ಣಿನ ಮೇಲೆ ನಡೆಸುವ ಅತ್ಯಾಚಾರವನ್ನು ಕುರಿತು ವಿವರಿಸುತ್ತವೆ. ಅತ್ಯಾಚಾರಕ್ಕೆ ಒಳಪಟ್ಟ ಹೆಣ್ಣು ಅತ್ಯಾಚಾರ ನಡೆಯುವಾಗ ಅನುಭವಿಸುವ ಹಿಂಸೆ, ನೋವುಗಳಿಗಿಂತ ಅತ್ಯಾಚಾರದ ನಂತರದಲ್ಲಿ ಅದರ ಪರಿಣಾಮಗಳನ್ನು ಎದುರಿಸುವಲ್ಲಿ ಎಷ್ಟೋ ಮಹಿಳೆಯರು ಸೋತು ಸಾವಿಗೆ ಶರಣಾಗಿದ್ದಾರೆ. ಇನ್ನು ಕೆಲವು ಪ್ರಸಂಗಗಳಲ್ಲಿ ಅತ್ಯಾಚಾರಿಗಳೇ ಅವಳನ್ನು ಕೊಲೆಗೈದಿದ್ದಾರೆ. ಅತ್ಯಾಚಾರಿಗಳು ಹೆಣ್ಣನ್ನು ನೋಡುವ ದೃಷ್ಟಿಕೋನ ಹಾಗೂ ಅವಳನ್ನು ಒಂದು ವಸ್ತುವಂತೆ ಉಪಯೋಗಿಸುವುದನ್ನು ಕುರಿತು ಎಚ್. ಎಲ್. ಪುಷ್ಪ ಅವರು ತಮ್ಮ ಕಾವ್ಯದಲ್ಲಿ ಈ ರೀತಿ ಹೇಳುತ್ತಾರೆ.

***ದ್ರೌಪದಿ ದೋಪ್ದಿಯಾದರೇನು........***
***ಮದಿರೆ ಕಣ್ಣುಗಳಲ್ಲಿ ಕುಣಿವ ಮಾಂಸದ ಮುದ್ದೆ***
***ಗಂಡಸರೆಂಬ ಲಾಟಿ ಬೂಡು ಮೈಮೇಲೆ..... ಹೆಣ್ಣೆಂದರೆ ಮೋಜು***
***ಸುಲಭವಾಗಿ ಸವಿಯುವ ತಿಂಡಿ / ಹರಿದು ತಿಂದರು ಒಬ್ಬೊಬ್ಬರೂ***
***ಅವರ ಅಮ್ಮ ಅಕ್ಕ ತಂಗಿಯರನ್ನು / ಕಾಣದ ಇನ್ನೊಬ್ಬರು.***

(ದೋಪ್ದಿ ಹಾಗೂ ಹೆಜ್ಜೆಗಳು – 28)

ಮಹಾಭಾರತದ ದ್ರೌಪದಿಯ ಪಾತ್ರವು ಪುರುಷರ ಶೋಷಣೆಯ ವಿರುದ್ಧ ಸಿಡಿದೆದ್ದ ವಿಶಿಷ್ಟ ಪಾತ್ರವಾಗಿದೆ. ಇಷ್ಟು ಗಟ್ಟಿಗಿತ್ತಿಯಾದ ದ್ರೌಪದಿಯಾದರೂ ಸರಿಯೇ ಬೇರೆ ಸಾಮಾನ್ಯ ಹೆಣ್ಣಾದರೂ ಸರಿಯೇ, ಗಂಡಸಿನ ಕಣ್ಣಿನಲ್ಲಿ ಅವಳು ಮಾಂಸದ ಮುದ್ದೆಯಷ್ಟೇ, ಅವಳಿಗೆ ಭಾವನೆಗಳಿಲ್ಲ, ನೋವಿಲ್ಲ, ನಲಿವಿಲ್ಲ. ಹೆಣ್ಣನ್ನು ಸಮಾಜದಲ್ಲಿ ಒಂದು ಜೀವಂತ ಗೊಂಬೆಯನ್ನಾಗಿ ಮೋಜಿಗಾಗಿ ಬಳಸಿಕೊಳ್ಳುತ್ತಿದ್ದಾರೆ. ಹೆಣ್ಣು ಎಲ್ಲೆಂದರಲ್ಲಿ ಸುಲಭವಾಗಿ ಸಿಕ್ಕುವ ಅಂಗಡಿಯಲ್ಲಿನ ಒಂದು ತಿನಿಸು ಇದ್ದ ಹಾಗೆ, ತಿನ್ನುವ ಬಯಕೆ ಇದ್ದಾಗ ತಿನಿಸನ್ನು ತಿನ್ನುವ ಹಾಗೆ ಕಾಮುಕ ದೃಷ್ಠಿಯಿಂದ ಲೈಂಗಿಕ ಬಯಕೆಗಾಗಿ ಹೆಣ್ಣನ್ನು ಹೇಗೆ ಬೇಕೋ ಹಾಗೆ ಈ ವ್ಯವಸ್ಥೆ ಬಳಸಿಕೊಳ್ಳುತ್ತಿದೆ. ಅವಳು ಹೆಣ್ಣಾಗಿ / ವ್ಯಕ್ತಿಯಾಗಿ ಕಾಣುವುದೇ ಇಲ್ಲ. ಹೆಣ್ಣನ್ನು ಕಂಡ ಕ್ಷಣ ಪುರುಷರಿಗೆ ಅಮಲೇರುತ್ತದೆ. ಅವರ ಕಣ್ಣಿಗೆ ಮಾಂಸದ ಮುದ್ದೆಯಾಗುತ್ತಾಳೆ. ಅವಳ ಭಾವನೆಗಳಿಗಾಗಲಿ, ಅನುಮತಿಗಾಗಲಿ ಕಾಯುವುದಿಲ್ಲ. ಎಲ್ಲೆಂದರಲ್ಲಿ ಹೆಣ್ಣುಗಳ ಮೇಲೆ ಅತ್ಯಾಚಾರವೆಸಗುತ್ತಿದ್ದಾರೆ ಎಂದು ಹೇಳುತ್ತಾರೆ. ಇನ್ನು ಮುಂದುವರಿದು ಅವರಾರಿಗೂ ಅಮ್ಮ, ಅಕ್ಕ, ತಂಗಿಯರೇ ಇಲ್ಲವೇನೋ? ಎಂಬ ಸಾಲನ್ನು ಗಮನಿಸಿದರೆ ಇಡೀ ವ್ಯವಸ್ಥೆಯ ಮಾದರಿ ತಿಳಿಯುತ್ತದೆ. ಸಮಾಜವು ಕೆಲವು ಸಂಬಂಧಗಳಿಗೆ ನೈತಿಕ ಬಂಧವನ್ನು ರೂಪಿಸಿದೆ. ಅಮ್ಮ, ಅಕ್ಕ, ತಂಗಿಯರು ಇದ್ದಂತವರಿಗೆ, ಅಮ್ಮ, ಅಕ್ಕ, ತಂಗಿಯ ನೋವು, ಅಳಲು ತಿಳಿದಿರುತ್ತದೆ. ಆದ ಕಾರಣದಿಂದ ಹೆಣ್ಣಿನ ಬಗೆಗೆ ಗೌರವ ಮನೋಭಾವ ಮೂಡಿರುತ್ತದೆ. ಆದರೆ ಅತ್ಯಾಚಾರ ಎಸಗುವವರಿಗೆ ಅಕ್ಕ, ಅಮ್ಮ, ತಂಗಿಯರು ಇರಲ್ಲಿಲ್ಲವೇನೋ ಎಂದು ವಾಚ್ಯವಾಗಿ ಬಳಸಿದ್ದಾರೆ.

ಸಮಾಜವು ಅತ್ಯಾಚಾರವನ್ನು ಹೆಣ್ಣನ್ನು ನಿಯಂತ್ರಿಸುವ ಒಂದು ಅಸ್ತ್ರವನ್ನಾಗಿ ಬಳಸಿಕೊಂಡಿದ್ದಾರೆ. ಕೆಲವರು ದ್ವೇಷದ ಕಾರಣಕ್ಕೊ, ಇನ್ನು ಕೆಲವರು ಕಾಮುಕ ತೃಷೆಯನ್ನು ಈಡೇರಿಸಿಕೊಳ್ಳಲೋ ಅಥವಾ ತಮ್ಮ ಘನತೆ, ಗೌರವವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಅತ್ಯಾಚಾರವೆಂಬ ಅಸ್ತ್ರವನ್ನು ಉಪಯೋಗಿಸುತ್ತಾರೆ. ಬೇರೆ ಬೇರೆ ಕಾರಣಕ್ಕಾಗಿ ಅತ್ಯಾಚಾರವನ್ನು ಎಸಗುವುದಕ್ಕೆ ಭಾರತಿ. ಜಿ. ವಿ. ಅವರು ಈ ರೀತಿಯಾಗಿ ಹೇಳುತ್ತಾರೆ,

***ಹಸಿವಿಲ್ಲದಿದ್ದರೂ ಹಸಿಮಾಂಸಕ್ಕೆ ಮುಗಿಬಿದ್ದು***
***ಹರಿದು ಬಗೆದು***
***ತಿಂದು ತೇಗುವ ನಮ್ಮ ಕ್ರೌರ್ಯಕ್ಕೆ***
***ಯಾವ ಸಮಜಾಯಿಷಿ ಇದೆ ಹೇಳು***

(ಕ್ರೌರ್ಯ ಪುಟ ಸಂಖ್ಯೆ –28)

ಗಂಡಸಿಗೆ ತನಗೆ ಬೇಕು ಎನಿಸದಿದ್ದರೂ, ಲೈಂಗಿಕ ಕ್ರಿಯೆಯ ಕುರಿತು ಒಂದು ಕೆಟ್ಟ ಕುತೂಹಲ ಇರುತ್ತದೆ. ಆ ಕೆಟ್ಟ ಕುತೂಹಲದಿಂದ ಎಷ್ಟೋ ಹೆಣ್ಣು ಮಕ್ಕಳು ಬಲಿಯಾಗುತ್ತಿದ್ದಾರೆ. ಇಂತಹ ಕ್ರೌರ್ಯಕ್ಕೆ ಏನೆಂದು ಸಮಜಾಯಿಷಿಸುವುದು ಎಂದು ಸಮಾಜವನ್ನು ಪ್ರಶ್ನಿಸಿದ್ದಾರೆ.

ಶೀಲಾ ಅಂಕೋಲಾ ಅವರು ರಾತ್ರಿ ವೇಳೆಯಲ್ಲಿ ಹೆಣ್ಣಿನ ಮೇಲೆ ಅತ್ಯಾಚಾರ ಎಸಗಿ ಹೋಗುವ ಗಂಡಸರನ್ನು ಕುರಿತು ಈ ರೀತಿ ಹೇಳುತ್ತಾರೆ.

***ನನ್ನ ದೇಹ ಹಾಸಿಗೆ ಮಾಡಿ***
***ಬೆಳಗಾಗ ಮುರುಟಿಸಿ ಹೋದದ್ದು***
***ಹಂಗಿಲ್ಲದೇ ಉಂಡು ಎಂಜಲ ಬಿಟ್ಟು***
***ಬಿಸಿಲುಗುದುರೆಯನೇರಿ ಹಾರಿದ್ದು***
***ಆಗಲೇ ತಿಳಿದಿದ್ದು***
***ನೀನು ಚರಿತ್ರೆಗೆ ಮಸಿ ಬಳಿಯುವಾತ ಎಂದು***

(ಮತ್ತೆ ಚಿಗುರುವೆವು ಪುಟ ಸಂಖ್ಯೆ – 56 )

ಈ ಕಾವ್ಯದ ಸಾಲುಗಳು ಅತ್ಯಾಚಾರದ ನಂತರದ ಪರಿಣಾಮಗಳನ್ನು ಕುರಿತು ವಿವರಿಸುತ್ತದೆ. ಹೆಣ್ಣಿನ ದೇಹವನ್ನೆ ಹಾಸಿಗೆ ಮಾಡಿಕೊಂಡು, ಅವಳಿಗೆ ಇಚ್ಛೆ ಇಲ್ಲದಿದ್ದರೂ ಹಿಂಸಿಸಿ ಅವಳ ಮೇಲೆ ಬಲವಂತದಿಂದ ಅತ್ಯಾಚಾರ ಎಸಗುತ್ತಾರೆ, ಹೋಗುತ್ತಾರೆ ಅಲ್ಲದೇ ಅತ್ಯಾಚಾರವೆಸಗಿದ್ದರಿಂದ ಆಕೆಯು ಗರ್ಭವನ್ನು ಧರಿಸುವ ಸಾಧ್ಯತೆಯಿರುತ್ತದೆ. ಅಷ್ಟೇ ಅಲ್ಲದೇ ಅತ್ಯಾಚಾರದ ಪರಿಣಾಮವಾಗಿ ಸಮಾಜದ ನಿಂದನೆಯನ್ನು ಅನುಭವಿಸಬೇಕಾಗುತ್ತದೆ. ಅವಳ ಚರಿತ್ರೆಗೆ ಕಳಂಕವನ್ನು ಹುಟ್ಟಿ ಹಾಕುವ ಕಾರ್ಯ ಜರುಗುತ್ತದೆ. ಆದರೆ ಗಂಡು ತನಗೂ ಇದಕ್ಕೂ ಯಾವುದೇ ಸಂಬಂಧವಿಲ್ಲವೆಂಬಂತೆ ಸಮಾಜದಲ್ಲಿ ರಾಜರೋಷವಾಗಿ ತಿರುಗಾಡುವುದರ ಕುರಿತು ವ್ಯಂಗ್ಯತೆ ಇರುವುದನ್ನು ಈ ಕಾವ್ಯದ ಸಾಲುಗಳಲ್ಲಿ ಕಾಣಬಹುದು.

ರಾಮಾಯಣ, ಮಹಾಭಾರತ ಕಾಲಗಳಿಂದಲೂ ಹೆಣ್ಣಿನ ಮೇಲೆ ದೌರ್ಜನ್ಯ, ಶೋಷಣೆ ನಡೆಯುತ್ತಲೇ ಬಂದಿದೆ ಎಂಬುದಕ್ಕೆ ವಿಜಯ ಸುಬ್ಬರಾವ್ ಅವರು ತಮ್ಮ ಕಾವ್ಯದ ಮೂಲಕ ಕಟ್ಟಿಕೊಟ್ಟಿದ್ದಾರೆ.

***ದಿನಕ್ಕೊಬ್ಬರಾದರೂ***
***ದುಶ್ಯಾಸನರ ಕೈಯೊಳಗೆ***
***ವಿವಸ್ತ್ರಳಾಗುವ ನನಗೆ***
***ಕೂಗಿ ಕರೆದರೂ***
***ಚೀರಿ ಮಿಡಿದರೂ***
***ಕಿವುಡಾದ ಕೃಷ್ಣ***
***ಕೊಡಲಿಲ್ಲ ಒಮ್ಮೆಯೂ***
***ಅಕ್ಷಯದ ವಸ್ತ್ರದಾನ***
***ತಡೆದಿಲ್ಲ ಗಳಿಗೆಯೂ***
***ಸೋರಿ ಹೋಗುವ ಮಾನ***

(ಷೋಕೇಸಿನ ಮಹಿಳೆಯ ಸ್ವಗತ ಪುಟ ಸಂಖ್ಯೆ – 43 )

ಪ್ರತಿನಿತ್ಯವೂ ಹೆಣ್ಣು ಒಂದಲ್ಲ ಒಂದು ರೀತಿ ಶೋಷಣೆಗೆ ಒಳಗಾಗುತ್ತಲೇ ಇದ್ದಾಳೆ. ಎಲ್ಲಿಯಾದರೂ ಒಂದು ಕಡೆ ಶೋಷಣೆ ಜರುಗುತ್ತಲೇ ಇರುತ್ತದೆ. ಅಂದು ಮಹಾಭಾರತ ಕಾಲದಲ್ಲಿ ದುಶ್ಯಾಸನ ದ್ರೌಪದಿಯ ಸೀರೆಯನ್ನು ಸೆಳೆವಾಗ ಅವಳನ್ನು ಕೃಷ್ಣ ಬಂದು ಕಾಪಾಡಿದ. ನಡೆಯುತ್ತಿದ್ದ ಅನಾಚಾರವನ್ನು ತಡೆದ. ಆದರೆ ಇಂದು ರಕ್ಷಿಸಲು ಯಾರೂ ಬರುತ್ತಿಲ್ಲ. ಪ್ರತಿನಿತ್ಯ ಮಾನ ಕಳೆದುಕೊಳ್ಳುವ ಹೆಣ್ಣುಗಳಿಗೆ ರಕ್ಷಣೆ ಇಲ್ಲ. ಇಲ್ಲಿ ಕೃಷ್ಣನನ್ನು ರಕ್ಷಕನಾಗಿ ಸಂಬೋಧಿಸಲಾಗಿದೆ. ಪ್ರಸ್ತುತದಲ್ಲಿ ಕೃಷ್ಣನೆಂದರೆ ಕಾನೂನು, ಆಡಳಿತಾತ್ಮಕ ವ್ಯವಸ್ಥೆಯಾಗಿದೆ. ಅತ್ಯಾಚರದ ನಂತರದಲ್ಲಿ ಅವಳನ್ನು ಸಂತೈಸಲು, ಅಪರಾಧಿಗೆ ಕಾನೂನು ಕ್ರಮ ಕೈಗೊಳ್ಳಲು ಪ್ರಯತ್ನ ನಡೆಸಬಹುದು ಆದರೆ, ಅತ್ಯಾಚಾರ ನಡೆಯದಂತೆ ತಡೆಯುವ ಕಾನೂನು ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಯ ಅಗತ್ಯವಿದೆ ಎಂದು ಪರೋಕ್ಷವಾಗಿ ಬಿಂಬಿಸಿದ್ದಾರೆ.

ಶತಮಾನಗಳಿಂದ ಹೆಣ್ಣನ್ನು ಪುರುಷಪ್ರಧಾನ ವ್ಯವಸ್ಥೆಯು ದುರ್ಬಳಕೆ ಮಾಡುತ್ತಲೇ ಬಂದಿರುವುದರ ವ್ಯವಸ್ಥೆಯ ವಿರುದ್ಧ ಸೆಟೆದು ನಿಂದು ಸುಕನ್ಯಾ ಮಾರುತಿಯವರು ಮಾತನಾಡುತ್ತಾರೆ.

***ಈಗ ನಾನು / ದಾಳಿ ಮಾಡುತ್ತೇನೆ***
***ಆಗ ನಿನ್ನ ನೀಳ ಮೂಗು***
***ನಗುವ ಆ ತುಟಿ***
***ಮಿಂಚುವ ಕಣ್ಣು***
***ಗಂಡೆದೆಗಳೆಲ್ಲಾ ನನ್ನವೆ***

(ನಾನೆಚ್ಚೆತ್ತಾಗ, ಪುಟ ಸಂಖ್ಯೆ – 432)

ಇಷ್ಟು ವರ್ಷಗಳಿಂದ ಹೆಣ್ಣಿನ ಮೇಲೆ ದಾಳಿ ಮಾಡಿ ಅವಳ ನಗು, ಕನಸುಗಳನ್ನೆಲ್ಲಾ ನೀನು ನಾಶ ಮಾಡಿದ್ದೀಯಾ, ಇಷ್ಟು ದಿನ ನೀನು ದಾಳಿ ಮಾಡಿದ್ದು ಸಾಕು ಈಗ ನಾನು ದಾಳಿ ಮಾಡುತ್ತೇನೆ. ನಿನ್ನ ನೀಳ ಮೂಗು , ನಗು, ತುಟಿ, ಕಣ್ಣು, ಗಂಡೆದೆಗಳೆಲ್ಲಾ ನನ್ನವೇ ಎಂದು ವಿಡಂಬನಾತ್ಮಕವಾಗಿ ಹೇಳಿದ್ದಾರೆ. ಹೆಣ್ಣಿನ ಅಪ್ಪಣೆಯಿಲ್ಲದೆಯೇ ಅವಳ ದೇಹವನ್ನು ಬಳಸಿಕೊಳ್ಳುವ ಹಾಗೆ ನಾನು ಕೂಡ ನಿನ್ನ ಮೇಲೆ ದೇಹದ ಮೇಲೆ ದಾಳಿ ಮಾಡುತ್ತೇನೆ ಎಂದು ಆಕ್ರೋಶದಿಂದ ಹೇಳುತ್ತಾರೆ.

ಹೆಣ್ಣು ಮಕ್ಕಳು ಇಂದು ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರಿದು ಪ್ರಗತಿಯತ್ತ ಸಾಗುತ್ತಿದ್ದಾಳೆ. ವಿಮಾನ ಓಡಿಸುವುದು, ಚಂದ್ರಲೋಕಕ್ಕೆ ಹೋಗಿ ಬಂದದ್ದು, ಸಾಹಿತ್ಯ ರಚನೆಯಲ್ಲಿ ತೊಡಗಿದ್ದು, ಉರಿಯುವ ಬಿಸಿಲಿನಲ್ಲಿ ಬೀಜವನ್ನು ಬಿತ್ತಿ ಉಳುಮೆ ಮಾಡುವವರಿದ್ದಾರೆ. ಆಫೀಸ್‌ನಲ್ಲಿ ಸಹ ತಮ್ಮ ಪ್ರತಿಭೆಯನ್ನು ತೇಯ್ದು ಕೆಲಸ ಮಾಡುವವರಿದ್ದಾರೆ. ಅಷ್ಟೇ ಅಲ್ಲದೇ ಕುಟುಂಬದ ಎಲ್ಲ ಜವಬ್ದಾರಿಗಳ ಜೊತೆಗೆ ಮನೆಯ ಎಲ್ಲ ಕೆಲಸವನ್ನು ನಿರ್ವಹಣೆ ಮಾಡಿದ್ದೇವೆ. ಇಷ್ಟೇ ಅಲ್ಲದೇ ಹೆಣ್ಣು ಮಕ್ಕಳು ರಾಷ್ಟ್ರವನ್ನು ಸಹ ಆಳಿದ್ದಾರೆ. ಇಷ್ಟೇಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಹೊಂದಿ ಸಾಧನೆ ಮಾಡುತ್ತಿರುವುದನ್ನು ಕಾಣಬಹುದು. ಎಲ್ಲವನ್ನು ಜಯಿಸಿದ ಹೆಣ್ಣು ಗಂಡಸಿನ ಕಾಮುಕತನದ ಮುಂದೆ ಕೇವಲ ಒಂದು ಹುಲ್ಲೆಯಾದೆವು ಎನ್ನುತ್ತಾ ಮುಂದುವರಿದು ರೂಪಶ್ರೀ ಕಲ್ಲಿಗನೂರು ಅವರು ಈ ರೀತಿ ಹೇಳುತ್ತಾರೆ.

***ಕೊಬ್ಬಿದ ಗಂಡಸ್ತನದ ಸೊಕ್ಕಿಗೆ ಆಹಾರವಾದೆವು***
***ತಾಳದ ನೋವಿಗೆ ಅರುಚಿದೆವು ಕಿರುಚಿದೆವು***
***ಅತ್ಯಾಚಾರಗಳ ಲಾವರಸದಲ್ಲಿ ಬೆಂದು***
***ದೇಹ ಸುಟ್ಟುಕೊಂಡೆವು***
***ಮಾನದ ಪರದೆಗೆ ಕತ್ತಿ ಚುಚ್ಚಿಸಿಕೊಂಡು***
***ಛಿದ್ರಗೊಂಡೆವು ಚೂರುಗಳನಾಯ್ದುಕೊಂಡು***
***ಧೈರ್ಯದ ಹೊಲಿಗೆ ಹೊಲಿದು***
***ಚಂದದಿ ಕೌದಿಯಾದೆವು***
***ಒಲವು ಬೇಡಿದ ಒಡಲ ಕುಡಿಗೆ***
***ಬೆಚ್ಚನೆಯ ಮಡಿಲಾದೆವು***

(ನಾವು ಪುಟ ಸಂಖ್ಯೆ – 100)

ಸಮಾಜದಲ್ಲಿ ಹೆಣ್ಣನ್ನು ಅತ್ಯಾಚಾರ, ದೌರ್ಜನ್ಯ, ಮಾನ, ಮರ್ಯಾದೆ ಮುಂತಾದ ಮಾನದಂಡಗಳಿಂದ ಶೋಷಿಸಿದರೂ, ಹಿಂಸಿಸಿದರೂ ಎದೆಗುಂದದೇ ಧೈರ್ಯ ತಾಳುತ್ತಾ ನಮ್ಮನ್ನು ನಂಬಿದ ಕುಟುಂಬಗಳಿಗೆ ಆಸರೆಯಾಗುತ್ತೇವೆ. ಮುಗ್ಧ ಕಂದನಿಗೆ ಬೆಚ್ಚನೆಯ ಮಡಿಲನ್ನು ಸಹ ನೀಡುತ್ತೇವೆ ಎನ್ನುವ ಮೂಲಕ ಹೆಣ್ಣಿನ ಜೀವ ಮತ್ತು ಜೀವನ ತ್ಯಾಗದ ಕುರಿತು ಪ್ರಸ್ತಾಪವಿದೆ.

ಸಮಾಜದಲ್ಲಿ ಹೆಣ್ಣಿನ ಮೇಲೆ ನಿರಂತರವಾಗಿ ನಡೆಯುತ್ತಿರುವ ಅತ್ಯಾಚಾರವನ್ನು ಕುರಿತಾಗಿ ವ್ಯವಸ್ಥೆಯು ಯಾವ ನಿಲುವನ್ನು ಹೊಂದಿದೆ ಎಂಬುದನ್ನು ಈ ಕವಿತೆಯ ಮೂಲಕ ಗ್ರಹಿಸಬಹುದು.

***ಹೆಣ್ಣಿನ ಚೀತ್ಕಾರಗಳು***
***ಸೈರನ್‌ನಂತೆ ಕೂಗಿಕೊಳ್ಳುತ್ತಿವೆ***
***ನೋವು ಕೇಳಬೇಕಾದ ಕಿವಿಗಳಲ್ಲಿ***
***ಹಾಡು ರಿಂಗಣಿಸುತ್ತಿವೆ***
***ಪ್ರಶ್ನಿಸಬೇಕಾದ ಬಾಯಿಗಳು***

*ಯಾರು, ಎಲ್ಲೆಂಬ ಚರ್ಚೆಯಲ್ಲಿ*
*ನಿರತವಾಗಿವೆ*
*ಅತ್ಯಾಚಾರಗಳ ಆಘಾತಕ್ಕೆ ಗಾಯಗೊಂಡ*
*ಹೆಣ್ಣಿನ ಅಂಬುಲೆನ್ಸ್‌ನಲ್ಲಿ ಸಾಗುತ್ತಿರೆ*
*ಸುತ್ತ ಮುತ್ತ ನೂರಾರು ಗಾಡಿಗಳು*
*ಬದುಕಲು ದಾರಿ ಬಿಡಲೊಲ್ಲವು*
*ಅಕ್ಕ ತಂಗಿಯರನ್ನೆಲ್ಲ ಮುಕ್ಕಿ*
*ಮುಗಿಸಿದ ಕಾಮದ ಕಣ್ಣೀಗ*
*ಮನೆಯ ತೊಟ್ಟಿಲ ಕೂಸಿನ ಮೇಲೆ*
*ಹಾದಿಯಲ್ಲಿ ಕಿವಿಗೆ ಬಿದ್ದ ಚೀತ್ಕಾರದ*
*ದನಿ ತಮಗೆ ಸಂಬಂಧಿಸಿದ್ದಲ್ಲವೆಂದ*
*ಮೇಲೆ ಹೇಗೆ, ಯಾಕೆಂದು ಪ್ರತಿಕ್ರಿಯಿಸಲು ಚೌಕಾಸಿ*
*ಜೋರು ನಡೆಯುತ್ತಿದೆ*
*ಮಾಧ್ಯಮದ ಸೂಜಿ ಚುಚ್ಚಿದ ಮೇಲೆ*
*ಕೂತು ಹೊನ್ನು ಮುಕ್ಕುವ*
*ರಾಜಕಾರಣಿಗಳು ಎದ್ದು ಕೆಸರಾಟವಾಡುತ್ತಾರೆ*
*ಗಂಟಲು ದಣಿದ ಮೇಲೆ*
*ರಾತ್ರಿ ಮದ್ಯದ ಮದ್ದು ನುಂಗಿ ಮಲಗುತ್ತಾರೆ*
*ಬೆಳಗಾಗುವುದರೊಳಗೆ ಮತ್ತೊಂದಷ್ಟು*
*ಚೀತ್ಕಾರಗಳು ಕಿರುಚಿ ಅರಚಿ ತಣ್ಣಗಾದವು.*

(ಸೈರನ್, ಪುಟ ಸಂಖ್ಯೆ – 98, 99)

ಅತ್ಯಾಚಾರವನ್ನು ಕುರಿತು ವ್ಯವಸ್ಥೆಯು ಯಾವ ನೆಲೆಯಲ್ಲಿ ಗ್ರಹಿಸುತ್ತದೆ ಎಂಬುದನ್ನು ಈ ಕವನ ಸಾಕ್ಷೀಕರಿಸಿದೆ. ಅತ್ಯಾಚಾರ ನಡೆದ ನಂತರದಲ್ಲಿ ಹೆಣ್ಣಿನ ಮನಸ್ಥಿತಿ, ದೇಹಸ್ಥಿತಿಯ ಕುರಿತು ಸಮಾಜ ಗಮನ ಹರಿಸುವುದಿಲ್ಲ. ವ್ಯವಸ್ಥೆಯನ್ನು ಪ್ರಶ್ನಿಸುವವರು ಯಾರು, ಎಲ್ಲಿ ಎಂಬ ಚರ್ಚೆಯಲ್ಲಿ ಮುಳುಗಿದ್ದಾರೆಯೇ ಹೊರತು, ಅತ್ಯಾಚಾರದ ವಿರುದ್ಧದ ಒಂದು ಧ್ವನಿಯೂ ಸಹ ಬರುವುದಿಲ್ಲ. ಕೆಲವು ರಾಜಕಾರಣಿಗಳು ಅಧಿಕಾರ ದುರುಪಯೋಗ ಪಡಿಸಿಕೊಂಡು ಅತ್ಯಾಚಾರದ ಕೇಸುಗಳನ್ನು ಮುಚ್ಚಿ ಹಾಕಿದ್ದಾರೆ. ಮಾಧ್ಯಮದಲ್ಲಿ ಭರವಸೆ ನೀಡಿ ನಂತರದಲ್ಲಿ ನಮಗೂ ಈ ವಿಷಯಕ್ಕೂ ಯಾವುದೇ ಸಂಬಂಧವಿಲ್ಲವೆಂಬಂತೆ ಇದ್ದು ಬಿಡುತ್ತಾರೆ ಎಂಬ ಆಕ್ರೋಶವು ಈ ಕಾವ್ಯದಲ್ಲಿ ವ್ಯಕ್ತವಾಗಿದೆ.

ಇದುವರೆಗೂ ಸಮಾಜದ ಯಾವುದೋ ಹೆಂಗಸಿನ ಮೇಲೆ ನಡೆಯತ್ತಿದ್ದ ಅತ್ಯಾಚಾರ, ಈಗ ಕುಟುಂಬದೊಳಗೆ ಕುಟುಂಬದ ಸದಸ್ಯರಿಂದಲೇ ನಡೆಯುತ್ತಿದೆ. ಅಕ್ಕ, ತಮ್ಮ, ಅಣ್ಣ, ಭಾವ ಮೈದನ

ಮುಂತಾದ ಸಂಬಂಧಗಳು ಶಿಥಿಲಗೊಂಡು ಹಸುಗೂಸು ಕಂದಮ್ಮನಿಂದ ಹಿಡಿದು ವೃದ್ಧೆಯವರೆಗೂ ಹೆಣ್ಣು ಜೀವನದುದ್ದಕ್ಕೂ ನಿರಂತರವಾಗಿ ಅತ್ಯಾಚಾರಕ್ಕೆ ಒಳಗಾಗುತಿದ್ದಾಳೆ. ಇವುಗಳಿಗೆ ಪೂರ್ಣವಿರಾಮವೆಂಬುದಿಲ್ಲವೆಂಬುದನ್ನು ಕುರಿತು ಪ್ರತಿಭಾ ನಂದಕುಮಾರ್ ಅವರು ಈ ರೀತಿ ಹೇಳುತ್ತಾಳೆ

*ನಾವು ಕಚಕುಚಗಳ ಬಗ್ಗೆ ಬರೆಯಬಾರದು*
*ನೀವು ಅದನ್ನು ವಿರೂಪಗೊಳಿಸಬಹುದು*
*ನಾವು ತೊಡೆ ಜಘನ ನಾಬಿ ಸ್ಥಳಗಳನ್ನು ಕಾಣಿಸಬಾರದು*
*ನೀವದನ್ನು ಅತಿಕ್ರಮಿಸಿ ಸ್ಥಾಪಿಸಬಹುದು*
*ನಾವು ಯೋನಿಗೆ ಅಪಚಾರವಾಗದಂತೆ ಕಾಯ್ದಿರಿಸಿಕೊಳ್ಳಬೇಕು*
*ನೀವದರ ಅತ್ಯಾಚಾರಕ್ಕೆ ಸದಾ ಹಾತೊರೆಯಬಹುದು ।*
*ನಮ್ಮ ಗರ್ಭದೊಳಗೆ ಹೆಂಗಸು ಹುಟ್ಟಬಾರದು*
*ನೀವು ಹುಟ್ಟು ಕಂದಮ್ಮಗಳನ್ನೂ ಮುಟ್ಟು ಹಾಕಿಕೊಳ್ಳಬಹುದು ।*
*ನಾವು ಹೊಸಿಲು ದಾಟಿದರೂ ಅಡುಗೆ ಮನೆಯೊಳಗೇ ಬೆಂದರೂ*
*ಮೆಟ್ಟಿಲು ಹಜಾರ ಅಂಗಳ ಬಚ್ಚಲಮನೆ ಬಾಲ್ಕನಿಯಲ್ಲಿ ನಿಂತರೂ*
*ಕೂತರೂ ಮಲಗಿದರೂ ಮಂಡಿ ಮಡಿಚಿ ಗುಬರಿಟ್ಟು ಗೋಗರೆದರೂ*
*ನೀವು ಭವಿಷ್ಯ ನುಡಿಯಬಹುದು*
*ಇಂಥಲ್ಲಿ ಇಷ್ಟಹೊತ್ತಿಗೆ ಹೀಗೆ ಇಂಥವರಿಂದ*
*ವಿನಾಕಾರಣ ಅತ್ಯಾಚಾರಕ್ಕೊಳಗಾಗುತ್ತೀರಿ ।*
*ತಂದೆ ಅಣ್ಣ ತಮ್ಮ ಮೈದುನ ಭಾವ ಪಕ್ಕದ ಮನೆಯವಳ ಗಂಡ*
*ಒಂದು ಶಿಶ್ನವಷ್ಟೇ ಅಸ್ತಿತ್ವವುಳ್ಳ ಗಂಡು ಪ್ರಾಣಿ ಯಾವುದಾದರೂ*
*ನಮ್ಮನ್ನು ಶ್ಲೀಲದಿಂದ ಅಶ್ಲೀಲದೆಡೆಗೆ*
*ಮಾನಭಂಗದಿಂದ ಭಂಗದವರೆಗೆ*
*ಪಾವಿತ್ರ್ಯದಿಂದ ಮಾಲಿನ್ಯಕ್ಕೆ*
*ಪವಿತ್ರತೆಯಿಂದ ಕುಲಟೆಯಾಗಿಸಿ*
*ಸತಿಯಿಂದ ಸೂಳೆಯಾಗಿಸಿ*
*ಸ್ಥಾನಪಲ್ಲಟಗೊಳಿಸಬಹುದು*
*ನಾವು ಭಯಬೀತರಾಗಿ ಬೆಚ್ಚಿ*
*ಮುಚ್ಚಿಕೊಳ್ಳಬೇಕು ಸ್ತನಗಳನ್ನು*
*ಹೊಲಿದುಕೊಳ್ಳಬೇಕು ಯೋನಿಗಳನ್ನು*
*ಜಾರಿಸಿಕೊಳ್ಳಬೇಕು ಬಸಿರುಗಳನ್ನು*
*ಒರೆಸಿಕೊಳ್ಳಬೇಕು ರಕ್ತ ಸಿಕ್ತ ತೊಡೆಗಳನ್ನು*

*ಬಿಗಿ ಹಿಡಿಯಬೇಕು ಜಜ್ಜಿದ ತುಟಿಗಳನ್ನು*
*ಎಂದು ಭ್ರಮಿಸಿ ನಿಮ್ಮ ಪುರುಷತ್ವದ ಅಹಮ್ಮಿನಲ್ಲಿ*
*ಹೀಗೆ ತೇಲಿದರೆ ಗಾಳಿ ತುಂಬಿದ ಬಲೂನಿನಲ್ಲಿ*
*ಬಹಳ ಬೇಗ ನೆಲಕ್ಕೆಳಿಯುವಿರಿ ಚುಚ್ಚಿ ನಿಜದ ಸೂಜಿ*
*ಸ್ರಾವ ನಿಂತರೂ ಹೆಣ್ಣು ಹೆಣ್ಣೇ*
*ನಾವೇನೋ ಹೇಗೋ ಸವೆಸುವೆವು ಕಾಲ ಆದರೆ......*
*ಆಪಕಾ ಕ್ಯಾ ಹೋಗಾ ಜನಾಬೇ ಅಲೀ*

(ನಾವು ಕಚ ಕುಚಗಳ ಬಗ್ಗೆ ಬರೆಯಬಾರದು, ಪುಟ ಸಂಖ್ಯೆ – 111)

ಈ ಕವಿತೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣಿಗೆ ವಿಧಿಸಿರುವ ನೀತಿ, ನಿಯಮ, ಕಟ್ಟಳೆಗಳನ್ನು ಕುರಿತು ಹೇಳುತ್ತಾರೆ. ಅದರ ಜೊತೆಗೆ ಕಟ್ಟಳೆಗಳಿಂದ ಆಕ್ರೋಶಗೊಂಡು ಅದರಿಂದ ಹೊರ ಬರುವ ಅಥವಾ ಅವುಗಳನ್ನು ಮುರಿಯುವ ಪ್ರಯತ್ನವನ್ನು ಹೇಗೆ ಮಾಡಬೇಕು ಎಂದು ತಿಳಿಸಿದ್ದಾರೆ. ಇಲ್ಲಿ ನಾವು ಎಂಬುದು ಮಹಿಳೆಯರನ್ನು ಸೂಚಿಸುವ ಪದವಾಗಿದ್ದು ಮಹಿಳೆಯರು ಹೇಗೆ ಗಂಡಸರನ್ನು ಎದುರುಗೊಳ್ಳಬೇಕು ಅವರ ಮುಷ್ಠಿಯಿಂದ ಹೇಗೆ ಬಿಡುಗಡೆ ಪಡೆಯಬೇಕು ಎಂದು ವಿವರಿಸಿದ್ದಾರೆ.

ಓದುಗರು ಲೇಖಕಿಯರ ಬರವಣಿಗೆಯನ್ನು ಗ್ರಹಿಸುವುದಕ್ಕೂ , ಲೇಖಕರ ಬರವಣಿಗೆಯನ್ನು ಗ್ರಹಿಸುವುದಕ್ಕೂ ಅಗಾಧ ವ್ಯತ್ಯಾಸವಿದೆ. ಕೃತಿಯ ನೆಲೆಯನ್ನು ಹೊರತುಪಡಿಸಿ ವ್ಯಕ್ತಿಯ ನೆಲೆಯಲ್ಲಿ ಗ್ರಹಿಸಿಕೊಳ್ಳುತ್ತಾರೆಂದು, ಅಲ್ಲದೇ ಬರೆದದ್ದನ್ನು ತಮಗೆ ಹೇಗೆ ಬೇಕೋ ಹಾಗೆ ತಿರುಚಿಕೊಂಡು ನೋಡುತ್ತಾರೆ. ಅಂತಹದ್ದರಲ್ಲಿ ಕಚ ಕುಚಗಳ ಬಗ್ಗೆ ಬರೆದರೆ ವಿರೂಪಗೊಳಿಸದೆ ಇರುವುದುಂಟೇ? ಎಂದು ಬಹಳ ವ್ಯಂಗ್ಯವಾಗಿ ಹೇಳಿದ್ದಾರೆ. ಸಮಾಜವು ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯರ ವೇಷ ಭೂಷಣಗಳ ಮೇಲೆ ನಿರ್ಬಂಧ ಹೇರಿದೆ. ಅವಳ ಇಚ್ಚೆ ಅವಳ ದೇಹಕ್ಕಷ್ಟೇ ಸೀಮಿತವಾಗಿರದೇ ಗಂಡಸಿನ ಕಾಮವನ್ನು ಪ್ರಚೋದಿಸುವಂತಿದೆ ಎಂಬ ಆರೋಪ ಮಾಡುತ್ತಾರೆ. ಇನ್ನು ಕೆಲವರು ಹೆಣ್ಣು ಮಕ್ಕಳು ತೊಡೆ, ಜಘನ, ನಾಭಿ ತೋರಿಸುವಂತಹ ಉಡುಪು ಧರಿಸುವುದರಿಂದಲೇ ಅವರ ಮೇಲೆ ಅತ್ಯಾಚಾರ ನಡೆಯುತ್ತಿರುವುದು, ಅವರು ತಮ್ಮ ಮೈಯನ್ನು ಮುಚ್ಚಿಕೊಂಡಿದ್ದರೆ ಹೀಗೆ ಆಗುತ್ತಿರಲಿಲ್ಲ ಎಂಬ ಉಡಾಫೆಯ ಮಾತುಗಳು ಸಹ ಕೇಳಿ ಬರುತ್ತವೆ. ಇಲ್ಲಿ ಗಂಡಸಿನ ಮನಸ್ಸನ್ನು ನಿಯಂತ್ರಿಸುವ ಜವಾಬ್ದಾರಿಯೂ ಸಹ ಹೆಣ್ಣಿನದೆ ಆಗಿದೆ. ಇನ್ನು ಪುರುಷ ಪ್ರಧಾನ ಸಮಾಜವು ಹೆಣ್ಣು ದೇಹದ ಮೇಲೆ ಧರಿಸುವ ಉಡುಪುಗಳಿಗಷ್ಟೇ ನಿರ್ಬಂಧ ಏರಿಲ್ಲ. ಆವಳ ದೇಹದ ಮೇಲೆಯೂ ಸಹ ನಿರ್ಬಂಧ ಹೇರಿದ್ದಾರೆ.

ಹೆಣ್ಣು ಮಕ್ಕಳಿಗೆ ಯೋನಿ ಶುಚಿತ್ವ, ಪವಿತ್ರತೆ ತುಂಬಾ ಮುಖ್ಯವಾಗುತ್ತದೆ. ಅವಳು ಬಾಲ್ಯದಿಂದ ಹಿಡಿದು ಸಾಯುವವರೆಗೂ ಶುಚಿತ್ವ ಹೊಂದಿರಬೇಕು. ಗಂಡನನ್ನು ಹೊರತುಪಡಿಸಿ ಮಿಕ್ಕ ಗಂಡಸರಿಂದ ಅಪಚಾರವಾಗದಂತೆ ನೋಡಿಕೊಳ್ಳಬೇಕು ಈ ರೀತಿಯಾಗಿ ವ್ಯವಸ್ಥೆಯ ಭಯದಿಂದ ಕಾಪಾಡಿಕೊಂಡು ಬಂದಂತಹ ಶುಚಿತ್ವವನ್ನು ಗಂಡಸರು ಅತ್ಯಾಚಾರವೆಸಗಿ ಪಾವಿತ್ರ್ಯವನ್ನು ಅಲ್ಲಗಳೆಯಬಹುದು ಅಥವಾ ನಾಶ ಮಾಡಬಹುದು. ಪುಟ್ಟ ಕಂದಮ್ಮ, ಹಸುಗೂಸು ಎನ್ನದೇ ಅತ್ಯಾಚಾರವೆಸಗುವ ಪ್ರಸಂಗಗಳನ್ನು ಕಂಡಿದ್ದೇವೆ.

ಅಲ್ಲದೇ ಹೆಣ್ಣಿಗೆ ಸಮಾಜದಲ್ಲಿ ಅನೇಕ ನಿರ್ಬಂಧಗಳಿವೆ. ಮನೆಯಿಂದ ಹೊರ ಬಂದರೂ, ಕುಂತರೂ, ನಿಂತರೂ, ಮಲಗಿದರೂ ಎಲ್ಲದಕ್ಕೂ ಟೀಕೆಯ ಮಾತುಗಳು ಕೇಳಿ ಬರುತ್ತವೆ. ಅಡುಗೆ ಕೋಣೆಯಲ್ಲಿ ನೊಂದು ಬೆಂದರೂ ಅದು ಯಾರಿಗೂ ಕಾಣದು. ಅಷ್ಟೇ ಅಲ್ಲದೇ ಇಂದು ಅತ್ಯಾಚಾರದ ವಿರುದ್ಧ ಎಷ್ಟೇಲ್ಲಾ ಹೋರಾಟ, ಚಳುವಳಿಗಳು ನಡೆದರೂ, ಅತ್ಯಾಚಾರಕ್ಕೆ ಒಳಗಾಗುವ ಹೆಣ್ಣು ಗೋಗರೆದರೂ ಸಹ ಅತ್ಯಾಚಾರವೆಸಗುವುದು ಬಿಡುವುದಿಲ್ಲ. ಬೇಕಾದರೆ ಇಂತಹ ಸಮಯದಲ್ಲಿ ಇಂಥವರಿಂದ ಅತ್ಯಾಚಾರಕ್ಕೆ ಒಳಗಾಗುತ್ತೀರಿ ಎಂದು ಭವಿಷ್ಯವನ್ನು ಸಹ ನುಡಿಯಬಹುದು. ಇದುವರೆಗೂ ಸಮಾಜದ ಯಾವುದೋ ಒಬ್ಬ ವ್ಯಕ್ತಿ / ಅಪರಿಚಿತ ವ್ಯಕ್ತಿಯಿಂದ ನಡೆಯುತ್ತಿದ್ದ ಅತ್ಯಾಚಾರವು ಇಂದು ಕುಟುಂಬದ ಒಳಗೆ ನಡೆಯುತ್ತಿದೆ. ತಂದೆ, ಅಣ್ಣ, ತಮ್ಮ, ಗಂಡ ಇನ್ನಾರೋ ಪರಿಚಿತ ವ್ಯಕ್ತಿಯಿಂದ ಅತ್ಯಾಚಾರ ನಡೆಯುತ್ತಿರುವುದರ ವಿರುದ್ಧದ ಕೂಗು ಇಲ್ಲಿ ಧ್ವನಿಸುತ್ತಿದೆ. ಗಂಡಸು ಸಮಾಜದಲ್ಲಿ ಪ್ರಧಾನ ಪಾತ್ರವಹಿಸುವುದು ಕೇವಲ ಅವನಲ್ಲಿ ಅಸ್ತಿತ್ವವುಳ್ಳ ಶಿಶ್ನದಿಂದ ಮಾತ್ರ ಅವನು ಇದರ ಮೂಲಕ ಸಮಾಜದಲ್ಲಿ ತನ್ನ ಇರುವಿಕೆಯನ್ನು ಹಕ್ಕಿನಿಂದ, ದರ್ಪದಿಂದ ಗುರುತಿಸಿಕೊಳ್ಳುತ್ತಾನೆ. ಈ ಶಿಶ್ನವು ಅವನ ದೇಹದ ಒಂದು ಭಾಗ ಮಾತ್ರವಾಗಿರದೇ ಇಡೀ ವ್ಯವಸ್ಥೆಯನ್ನು ಕಪಿಮುಷ್ಠಿಯಲ್ಲಿರುವ ಒಂದು ಅಂಗವಾಗಿದೆ. ಇದರ ಮೂಲಕ ಅವನು ಶೀಲವಂತ ಹೆಣ್ಣನ್ನು ಅಶ್ಲೀಲಳನ್ನಾಗಿ ಮಾಡಬಹುದು. ಮಾನದಿಂದ ಬದುಕುತ್ತಿದ್ದವಳನ್ನು ಭಂಗಗೊಳಿಸಬಹುದು. ಇದುವರೆಗೂ ಪವಿತ್ರಳಾಗಿದ್ದವಳನ್ನು ಅಪವಿತ್ರಗೊಳಿಸಬಹುದು, ಗರತಿಯಾಗಿದ್ದವಳನ್ನು ಕುಲಟೆಯನ್ನಾಗಿಸಬಹುದು. ಗಂಡನಿಗೆ ಒಳ್ಳೆಯ ಹೆಂಡತಿಯಾಗಿದ್ದವಳನ್ನು ಸೂಳೆಯನ್ನಾಗಿಸಬಹುದು, ಇಷ್ಟೆಲ್ಲ ಮಾಡುವುದು ಕೇವಲ ಆ ಶಿಶ್ನದ ಮೂಲಕವೇ ಎಂದು ಮುಂದುವರಿದು ಅತ್ಯಾಚಾರದ ನಂತರದ ಪರಿಣಾಮಗಳು ಯಾವ ರೀತಿಯಾಗಿರುತ್ತವೆಯೆಂದು ಹೇಳಿದ್ದಾರೆ. ಅತ್ಯಾಚಾರಕ್ಕೊಳಗಾಗುವ ಮುನ್ನ ಶೀಲವಂತೆಯಾಗಿದ್ದವಳು ಅಶ್ಲೀಲವಂತಳಾಗಬಹುದು, ಪವಿತ್ರಳು ಮಲೀನಗೊಳ್ಳಬಹುದು. ಗಂಡನಿಗೆ ಒಳ್ಳೆಯ ಸತಿಯಾಗಿದ್ದವಳು ಸೂಳೆಯಾಗಬಹುದು. ಅವಳದು ಯಾವುದೇ ಪಾತ್ರವಿಲ್ಲದಿದ್ದರೂ ಅವಳನ್ನೇ ತಪ್ಪಿತಸ್ಥಳನ್ನಾಗಿ ಮಾಡುವ ಶಿಶ್ನದ ವಿರುದ್ಧ ಅಂದರೆ ವ್ಯವಸ್ಥೆಯ ವಿರುದ್ಧ ನಾವು ಎಷ್ಟೇ ಹೋರಾಟ, ಪ್ರಯತ್ನ ನಡೆಸಿದರೂ ಅಷ್ಟೇ ಸಫಲವಾಗುವುದಿಲ್ಲ. ಹಾಗಾಗಿ ನಮ್ಮ ಮೈ ಮನಸ್ಸನ್ನು ನಾವೇ ಮುಚ್ಚಿಕೊಳ್ಳಬೇಕು, ಗಂಡಸು ತನ್ನ ಮೇಲೆ ಆಕ್ರಮಣ ಮಾಡದಂತೆ ಸ್ತನಗಳನ್ನು ಕತ್ತರಿಸಿಕೊಳ್ಳಬೇಕು. ಯೋನಿಗಳನ್ನು ಹೊಲಿದುಕೊಳ್ಳಬೇಕು, ಬಸಿರು ನಿಲ್ಲದಂತೆ ಜಾರಿಸಿಕೊಳ್ಳಬೇಕು, ಗಂಡನು ಆಕ್ರಮಣಕ್ಕೆ ನಿಂತಾಗ ತುಟಿಗಳನ್ನು ಬಿಗಿ ಹಿಡಿದುಕೊಳ್ಳಬೇಕು ಈ ರೀತಿ ಮಾಡಿದರೆ ನಿಮ್ಮ ಪುರುಷರ ಅಹಮ್ ಏನಾಗುತ್ತದೆ ಎಂದರೆ ಒಂದು ರೀತಿ ಗಾಳಿ ತುಂಬಿದ ಬಲೂನಿನಂತೆ ವ್ಯವಸ್ಥೆ ಮಾಡಿಕೊಂಡಿದ್ದೀರೀ, ಆದರೆ ಸಣ್ಣ ಸೂಜಿಯಿಂದ ಚುಚ್ಚಿ ಮೇಲಕ್ಕೇರಿದ ನಿಮ್ಮನ್ನು ಬಲೂನಿನಂತೆ  ನೆಲಕ್ಕಿಳಿಸಬಹುದು. ಹೀಗೆ ಹೆಣ್ಣು ನಿಮ್ಮ ಕಟ್ಟಳೆ, ವ್ಯವಸ್ಥೆಗಳ ವಿರುದ್ಧ ತಿರುಗಿ ಬಿದ್ದರೂ ಸಹ ಹೆಣ್ಣು ಹೆಣ್ಣಾಗಿ ಉಳಿಯುತ್ತಾಳೆ. ಆದರೆ ಬಸಿರುಗಳನ್ನು ಜಾರಿಸಿಕೊಂಡ ನಂತರದಲ್ಲಿ ಗಂಡಸರಾದ ನಿಮಗೆ ಅಸ್ತಿತ್ವ ಎಲ್ಲಿದೆ? ಎಂದು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಆಕ್ರೋಶದಿಂದ ವಿಭಿನ್ನ ನೆಲೆಯಲ್ಲಿ ವಿಸ್ತರಿಸಿದ್ದಾರೆ. ಈ ಕವಿತೆಯಲ್ಲಿ ಯೋನಿ ಅಪಚಾರದ ಕುರಿತು ಪ್ರಸ್ತಾಪವಿರುವುದನ್ನು ಗಮನಿಸಿದ್ದೇವೆ. ಯೋನಿಯ ಕುರಿತಾಗಿರುವ ಎರಡು ಮುಖ್ಯ ಸಾಲುಗಳನ್ನು ಗಮನಿಸುವುದಾದರೆ,

*ನಾವು ಯೋನಿಗೆ ಅಪಚಾರವಾಗದಂತೆ ಕಾಯ್ದಿರಿಸಿಕೊಳ್ಳಬೇಕು*

*ಹೊಲಿದುಕೊಳ್ಳಬೇಕು ಯೋನಿಗಳನ್ನು*

ಈ ಸಾಲುಗಳನ್ನು ಕುರಿತು ವಿಸ್ತರಿಸುವುದಾದರೆ, ಮೊದಲನೇ ಸಾಲನ್ನು ಒಪ್ಪಿತ ನೆಲೆಯಲ್ಲಿ ಅಂದರೆ ಯೋನಿಗೆ ಅಪಚಾರವಾಗದಂತೆ ಕಾಯ್ದುಕೊಳ್ಳುತ್ತಾ ಬರುವುದನ್ನು ಹೆಣ್ಣು ಸ್ವೀಕರಿಸಿದ್ದಾಳೆ. ಆದರೆ ಗಂಡಸು ಅತ್ಯಾಚಾರವೆಸಗುತ್ತಾನೆ. ಎರಡನೇ ಸಾಲನ್ನು ವಿರೋಧಿಸುವ ನೆಲೆಯಲ್ಲಿ ವಿವರಿಸಿದ್ದಾರೆ, ಇಡೀ ಗಂಡಸಿನ ಅಧಿಕಾರ ದರ್ಪ ಅಡಗಿರುವುದೇ ಶಿಶ್ನದ ಮೂಲಕ ಯೋನಿಯನ್ನು ಅಪಚಾರಗೊಳಿಸುವುದರಲ್ಲಿ, ಇದನ್ನು ಹೊಲಿದುಕೊಂಡರೆ, ಗಂಡಸನ್ನು ಒಂದು ಹಂತದಲ್ಲಿ ನಿಯಂತ್ರಣಕ್ಕೆ ತರಬಹುದು ಎಂಬ ನಿಟ್ಟಿನಲ್ಲಿ ವಿವರಿಸಿದ್ದಾರೆ. ಇದೇ ರೀತಿಯ ಪ್ರಸಂಗ ಕುರಿತು ಮತ್ತೊಂದು ಸೇರಿಸುವುದಾದರೆ ಜಗದೀಶ ಕೊಪ್ಪ ಅವರು ಅನುವಾದಿಸಿದ **'ಮರುಭೂಮಿಯ ಹೂ'** ಕಾದಂಬರಿಯಲ್ಲಿ ಸೌದಿ ಅರೇಬಿಯಾದಲ್ಲಿರುವ ಹೆಣ್ಣುಗಳಿಗೆ ತಮ್ಮ ಬಾಲ್ಯದಲ್ಲೇ ಯೋನಿಗೆ ಹೊಲಿಗೆಗಳನ್ನು ಹಾಕುತ್ತಾರೆ. ಈ ಹೊಲಿಗೆಗಳನ್ನು ಹಾಕುವ ಉದ್ದೇಶ ಯೋನಿಯ ಶುಚಿತ್ವ ಕಾಪಾಡಿಕೊಂಡು ಬರುತ್ತಾರೋ,  ಎಂಬ ಪರೀಕ್ಷೆಗಾಗಿ ಹಾಕುತ್ತಾರೆ. ಒಂದು ವೇಳೆ ಯಾವುದೋ ಕಾರಣಕ್ಕೆ ಯೋನಿಯ ಹೊಲಿಗೆ ಬಿಚ್ಚಿಕೊಂಡರೆ ಅವಳು ಅಪವಿತ್ರಗೊಂಡಿದ್ದಾಳೆ ಎಂದು ಗಂಡನಾಗುವವನಿಗೋ ಅಥವಾ ಗಂಡಸಿಗೆ ಮೋಸ ಮಾಡಿದವಳೆಂದು ಅವಳನ್ನು ನಿರ್ಜನ ಪ್ರದೇಶಕ್ಕೆ ಒಯ್ದು ಜೀವ ಸಹಿತವಾಗಿ ಚಿತ್ರಹಿಂಸೆ ನೀಡಿ ಕೊಲೆಗಯ್ಯುತ್ತಾರೆ. ಈ ಪ್ರಸಂಗವನ್ನು ಇಲ್ಲಿ ಹೇಳಿರುವ ಉದ್ದೇಶವೆಂದರೆ, ಯೋನಿಯ ಶುಚಿತ್ವವು ಗಂಡಸಿನ ಕಣ್ಣಲ್ಲಿ ಯಾವ ರೀತಿಯಾಗಿ ಬೇರೂರಿವೆ ಎಂಬುದನ್ನು ತಿಳಿಸಲು ಹಾಗೂ ಕವಯತ್ರಿ ಯೋನಿಗೆ ಹೊಲಿಗೆ ಹಾಕಿಕೊಳ್ಳುವುದನ್ನು ವ್ಯವಸ್ಥೆಯ ವಿರೋಧ ನೆಲೆಯಲ್ಲಿ ವಿವರಿಸಿದರೆ, ಇಲ್ಲಿನ ವ್ಯವಸ್ಥೆಯು ಯೋನಿ ಹೊಲಿಗೆಯ ಮೂಲಕ ನಿಯಂತ್ರಣ ಹೇರಿರುವುದನ್ನು ಗಮನಿಸಬಹುದು.

ಒಟ್ಟಾರೆಯಾಗಿ ಪ್ರತಿಭಾನಂದಕುಮಾರ್ ಅವರು ತಮ್ಮ ಕಾವ್ಯದ ಮೂಲಕ ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣಿನ ಚಹರೆಯ ಮೇಲೆ ಹೇರಿರುವ ನಿರ್ಬಂಧಗಳನ್ನು ಹಾಗೂ ಆ ನಿರ್ಬಂಧಗಳನ್ನು ಮುರಿದು ಹೊರ ಬರುವ ದಾರಿಯನ್ನು ತಿಳಿಸಿದ್ದಾರೆ. ಇಲ್ಲಿ ವ್ಯವಸ್ಥೆಯ ವಿರುದ್ಧ ಗಂಡಸಿನ ಕಾಮದ ವಿರುದ್ಧದ ಆಕ್ರೋಶ ಎಲ್ಲೆಡೆ ವ್ಯಕ್ತವಾಗಿರುವುದನ್ನು ಗಮನಿಸಬಹುದು.

ಇದುವರೆಗೂ ಸಮಾಜದಲ್ಲಿ ನಡೆಯುವಂತಹ ಅತ್ಯಾಚಾರಗಳನ್ನು ಕುರಿತು ಮಹಿಳಾ ಕಾವ್ಯಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂದು ತಿಳಿದೆವು ಈಗ ಸಮಾಜವನ್ನು ಹೊರತುಪಡಿಸಿ, ಕುಟುಂಬದಲ್ಲಿ ನಡೆಯುವ ಅತ್ಯಾಚಾರದ ಕುರಿತು ಮಹಿಳಾ ಕಾವ್ಯಗಳಲ್ಲಿ ಹೇಗೆ ಅಭಿವ್ಯಕ್ತವಾಗಿವೆ. ಎಂಬುದನ್ನು ತಿಳಿಯಬೇಕಾಗಿದೆ.

ದಾಂಪತ್ಯದಲ್ಲಿ ನಡೆಯುವ ಅತ್ಯಾಚಾರವನ್ನು ಕುರಿತು ಪದ್ಮಾ ಶೇಖರ್ ಅವರು ಈ ರೀತಿ ಹೇಳುತ್ತಾರೆ.

*ಎಂದಾದರೂ ಹಿಂಸೆ ಎಂದೆನೇ / ಅಯ್ಯೋ ಎಂದನೆ*

*ಬೇಡ ಎಂದೆನೆ / ನಿನಗಾಗಿ ಮರುಕಗೊಂಡೆ ಮಾತ್ರ*

(ಹಕ್ಕಿ ಹರೆಯ ಪುಟ ಸಂಖ್ಯೆ – 56)

ಕವಯತ್ರಿಯು ನೇರವಾಗಿ ತನ್ನ ಮೇಲೆ ನೀನು ದಾಳಿಯನ್ನು ನಡೆಸುತ್ತೀಯವೆಂದು ಹೇಳಿಲ್ಲ. ಆದರೆ ಈ ಕವಿತೆಯ ಸಾಲುಗಳು ಗಂಡನ ಲೈಂಗಿಕ ಸಂಬಂಧದಲ್ಲಿ ಮೃಗತ್ವದ ಲಕ್ಷಣಗಳು ಅಡಗಿವೆ ಎಂದು ಹೇಳಿರುವುದು ಪರೋಕ್ಷವಾಗಿ ಅತ್ಯಾಚಾರವನ್ನು ಸೂಚಿಸುತ್ತದೆ. ಆದರೆ ಹೆಂಡತಿಯಾದ ಕಾರಣ ತಾನು ಎಲ್ಲವನ್ನೂ ಸಹಿಸಿಕೊಂಡಿದ್ದೇನೆ, ನಿನ್ನ ವರ್ತನೆಯನ್ನು ಒಪ್ಪಿಕೊಂಡಿದ್ದೇನೆ. ನಿನ್ನ ಪ್ರೀತಿಗಾಗಿ ಮರುಕಗೊಂಡಿದ್ದೆನೆ ಎಂದು ಅಭಿವ್ಯಕ್ತಿಸಿದ್ದಾರೆ.

ದಾಂಪತ್ಯದಲ್ಲಿ ನಡೆಯುವ ಅತ್ಯಾಚಾರಕ್ಕೆ ಮತ್ತೊಂದು ಕಾವ್ಯವನ್ನು ವಿವರಿಸುವುದಾದರೆ, ಶಶಿಕಲಾ ವಸ್ತ್ರದ ಅವರ 'ಸಾವಿಲ್ಲದ ಶನಿ' ಎಂಬ ಕವನ ಸಂಕಲನದಲ್ಲಿ,

***ದಮಯಂತಿ / ನಿದ್ದೆಗಿಳಿದಾಗ***
***ಗಂಡನೇ ಉಟ್ಟ ಸೀರೆಯನೊಯ್ಯುವಾಗ***
***ಪುಂಡರನೇನು ಮಾಡುವುದು / ಬೈಗುಳಕೆ ಬಾಯಿಲ್ಲ***
***ಸೆರಗಿರುವುದೇತಮಗೆ 'ಹಾಸಲು' ಎಂದುಕೊಂಡೆ ಹುಟ್ಟಿ***
***ಅದರ ಮನೆಯಲ್ಲೇ / ಎದೆ ಹಾಲು ಹೀರಿ ಬೆಳೆವ***
***ಈ ಶನಿ ಸಂತಾನಕ್ಕೆ ಮಾತ್ರ ಸಾವಿಲ್ಲವಲ್ಲ.***

(ಸಾವಿಲ್ಲದ ಶನಿ ಪುಟ ಸಂಖ್ಯೆ – 58)

ಒಬ್ಬ ಹೆಣ್ಣು ಮಗಳು ತನ್ನ ಗೆಳತಿಯಾದ ದಮಯಂತಿಗೆ ತನ್ನ ಜೀವನದ ನೋವುಗಳನ್ನು ಹಂಚಿಕೊಳ್ಳುತ್ತಾಳೆ. ಆ ಸಂದರ್ಭದಲ್ಲಿ ಲೈಂಗಿಕ ಸಂಬಂಧದ ಕುರಿತು ಈ ರೀತಿ ಹೇಳಿದ್ದಾರೆ. ನಾನು ನಿದ್ದೆಯಲ್ಲಿದ್ದಾಗ  ನನ್ನ ಗಂಡನೇ, ನನ್ನ ಅಪ್ಪಣೆಯಿಲ್ಲದೇ ನನ್ನನ್ನು ಬಳಸಿಕೊಳ್ಳುವಾಗ ಇನ್ನು ಉಳಿದ ಗಂಡಸರನ್ನು ಹೇಗೆ ಬಯ್ಯುವುದು, ಅವಳ ದೇಹವಿರುವುದು ತನಗಾಗಿ ಎಂದು ಭಾವಿಸುವ ಈ ಗಂಡಸರಿಗೆ ಏನೆನ್ನಬೇಕು. ತನ್ನ ದೇಹದಿಂದಲೇ ಹುಟ್ಟಿ ಅಂದರೆ ಹೆಣ್ಣಿಗೆ ದೇಹದಿಂದಲೇ ಹುಟ್ಟಿ, ಅವಳ ಎದೆ ಹಾಲ ಕುಡಿದು ಬೆಳೆದು ಮತ್ತದೇ ಹೆಣ್ಣಿನ ಮೇಲೆ ಅತ್ಯಾಚಾರ ಎಸಗುವ ಈ ಗಂಡು ಸಂತಾನಕ್ಕೆ ಮಾತ್ರ ಕೊನೆಯೆಂಬುದಿಲ್ಲ. ಇಡೀ ಗಂಡು ಸಂತಾನವನ್ನೇ ಅಲ್ಲಗಳೆದಿದ್ದಾರೆ.

ಇದೇ ರೀತಿಯಾಗಿ ಗಂಡನಿಂದ ನಡೆಯುವ ಅತ್ಯಾಚಾರವನ್ನು ಕುರಿತು ಪಂಜಾಬಿನ ಕವಯತ್ರಿ ಮನಜಿತ್ ಟಿವಾಡ ಅವರು ಈ ರೀತಿ ಹೇಳುತ್ತಾರೆ.

***ಪತಿ ಒಬ್ಬ ಹಸಿದ ತೋಳ***
***ನಿನ್ನನ್ನು ಉಳಿದ ತೋಳಗಳಿಂದ ರಕ್ಷಿಸುತ್ತಾನೆ***
***ಆದರೆ ಕೊನೆಯಲ್ಲಿ ತಾನೇ ಭಕ್ಷಿಸುತ್ತಾನೆ***

(ಪಂಜಾಬಿ ಮಹಿಳಾ ಕಾವ್ಯ ಪುಟ ಸಂಖ್ಯೆ – 20)

ಸಮಾಜದಲ್ಲಿ ಹೆಣ್ಣು ಮುತ್ತೈದೆಯ ಸಂಕೇತಗಳಿಂದ ಹೆಣ್ಣು ಸುರಕ್ಷಿತ ಎಂಬ ಮನೋಭಾವನೆ ಬೆಳೆಸಿರುವುದನ್ನು ಕಾಣುತ್ತೇವೆ. ಯಾವುದೇ ಗಂಡಸಾಗಲೀ, ಮದುವೆಯಾದ ಹೆಣ್ಣನ್ನು ಕೆಟ್ಟ ದೃಷ್ಟಿಯಿಂದ

ನೋಡುವುದಿಲ್ಲ. ತಾಳಿ, ಕಾಲುಂಗುರಗಳು ಬೇರೆ ಗಂಡಸರು ಕೆಟ್ಟ ನೋಟ ಬಿಡದಂತೆ ರಕ್ಷಿಸುತ್ತವೆ. ಜೊತೆಗೆ ಮದುವೆಯಾದ ಗಂಡ ಜೊತೆಗಿದ್ದರೆ ಅವನು ಬೇರೆಯ ಗಂಡಸರುಗಳ ನೋಟದಿಂದ ಅವಳನ್ನು ರಕ್ಷಿಸಿದಂತಾಗುತ್ತದೆ ಎಂಬ ಪರಿಕಲ್ಪನೆ ಇದೆ. ಆದರೆ ಅವನು ಕೂಡ ಹೆಣ್ಣಿನಾಗಲೀ, ಹೆಂಡತಿಯನ್ನಾಗಲೀ ರಕ್ಷಿಸುವುದಿಲ್ಲ. ಏಕೆಂದರೆ ಅವನು ಹಸಿದ ತೋಳ ಇದ್ದ ಹಾಗೆ, ಉಳಿದ ತೋಳಗಳಿಂದ ರಕ್ಷಿಸಿ ಕೊನೆಯಲ್ಲಿ ತಾನೇ ಭಕ್ಷಿಸುತ್ತಾನೆ. ಅಂದರೆ ಮದುವೆಯಾದ ಗಂಡನು ತನ್ನ ಹೆಂಡತಿಯನ್ನು ಸಮಾಜದ ಇತರ ಗಂಡಸರುಗಳಿಂದ ರಕ್ಷಿಸಬಹುದು ಆದರೆ ಕೊನೆಯಲ್ಲಿ ಅವನೇ ಆಕ್ರಮಣ ಮಾಡುತ್ತಾನೆ ಎಂದು ದಾಂಪತ್ಯದಲ್ಲಿ ನಡೆಯುವ ಅತ್ಯಾಚಾರದ ಕುರಿತು ವಿವರಿಸಿದ್ದಾರೆ.

**ಉಪಸಂಹಾರ**

ಒಟ್ಟಾರೆಯಾಗಿ ಇಲ್ಲಿ ಇರುವ ಎಲ್ಲ ಕಾವ್ಯಗಳಲ್ಲೂ ಗಂಡು ಹೆಣ್ಣು ದೇಹವನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳುತ್ತಾನೆಂದು ತಿಳಿಸುತ್ತವೆ. ಸಮಾಜದಲ್ಲಿ ವಿಧಿಸಿರುವ ಪ್ರತಿಯೊಂದು ನಿಯಮ ಕಟ್ಟಳೆಗಳು ಹೆಣ್ಣಿನ ದೇಹವನ್ನೇ ಆಧರಿಸಿ ಗಂಡಿಗೆ ಬೇಕಾದಂತೆ ರೂಪುಗೊಂಡಿವೆ ಎಂಬುದನ್ನು ಸ್ಪಷ್ಟಗೊಳಿಸುತ್ತವೆ. ಅತ್ಯಾಚಾರವನ್ನು ಒಂದು ಅಸ್ತ್ರವನ್ನಾಗಿ, ನಿಯಂತ್ರಣದ ಸಾಧನವಾಗಿ ಬಳಸಿಕೊಳ್ಳುವುದರ ವಿರುದ್ಧ ಆಕ್ರೋಶವಿದೆ ಹಾಗೂ ಅತ್ಯಾಚಾರದ ನಂತರದಲ್ಲಿ ಹೆಣ್ಣು ಅನುಭವಿಸಬೇಕಾದ ಸಮಸ್ಯೆ, ಸವಾಲುಗಳ ಕುರಿತು ಚಿತ್ರಿಸಿದ್ದಾರೆ. ಸಮಾಜವು ಅತ್ಯಾಚಾರವನ್ನು ಕುರಿತಾಗಿ ಹೊಂದಿರುವ ನಿಲುವುಗಳನ್ನು ಅಭಿವ್ಯಕ್ತಿಸಿದ್ದಾರೆ. ಪ್ರಸ್ತುತ ಸಮಾಜವು ಪರಿಗಣಿಸದ ದಾಂಪತ್ಯದಲ್ಲಿ ನಡೆಯುವ ಅತ್ಯಾಚಾರವನ್ನು ಕುರಿತು ಪ್ರಸ್ತಾಪಿಸಿರುವುದನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು**


- ವಿಜಯಶ್ರೀ ಸಬರದ (ಸಂ.). (2013). ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ.
- ಸಬಿತಾ ಬನ್ನಾಡಿ. (2017). ಅವಳ ಕವಿತೆ. ಕವಿ ಪ್ರಕಾಶನ, ಹೊನ್ನಾವರ.